# ಕಸದಿಂದ ಕಲಾಕೃತಿ



■ ಟಿ.ಶ್ಯಾಮ್ ಪ್ರಸಾದ

ಓಲೆಗರಿ ಒಲವಿನ ಓಲೆಯಾಗುವುದಿಲ್ಲ, ಕುಪ್ಪಳಿಸುವ ಕಪ್ಪೆಯಾಗುತ್ತದೆ, ಹಾರುವ ಹಕ್ಕಿಯಾಗುತ್ತದೆ, ಈಜಾಡುವ ಮೀನಾಗುತ್ತದೆ! ಇದರ ಹಿಂದೆ ಚಂದ್ರಶೇಖರ ನಂಬಿಯಾರ್ ಕೈಚಳಕವಿದೆ. ಇವರು ಕಸದಿಂದ ರಸ ಉಕ್ಕಿಸಬಲ್ಲ ಕಲಾಜೀವಿ.

ಬಿ.ಎಸ್ಸಿ. ಪದವೀಧರರಾದ ಇವರು ವೃತ್ತಿಯಿಂದ ಕೃಷಿಕರು, ಪ್ರವೃತ್ತಿಯಿಂದ ಕಲಾವಿದರು. ಹಸಿಯಾದ ತೆಂಗು ಇಲ್ಲವೆ ಓಲೆ ಗರಿಯನ್ನು ಬೇಕಾದಂತೆ ಕತ್ತರಿಸಿ ತನ್ನ ಕಲ್ಪನೆಗೆ ಜೀವ ಕೊಡುವ ಇವರು ಹತ್ತಾರು ವಿಧದ ಹಕ್ಕಿಗಳು, ಕಪ್ಪೆಗಳು, ಮೀನು, ಏಡಿ, ಹಾತೆ, ಆಮೆ, ಚಿಟ್ಟೆ ಹೀಗೆ ನೂರೈವತ್ತಕ್ಕೂ ಮಿಕ್ಕಿ ಕಲಾಕೃತಿಗಳನ್ನು ರಚಿಸಬಲ್ಲರು. ಅಡಿಕೆ ಹಾಳೆ ಜಿಂಕೆಯ ರೂಪು ಪಡೆದರೆ ಬಲಿತ ಹಲಸು, ತೇಗದ ಮರದ ಬೊಡ್ಡೆ, ಬೇರುಗಳು ಗಣೇಶ, ಕೃಷ್ಣ, ಹನುಮಂತ, ಹಾವುಗಳ ರೂಪ ತಾಳುತ್ತವೆ.

ಮಹಾತ್ಮಾ ಗಾಂಧೀಜಿಯವರ 'ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ಆಡಬೇಡ' ಎಂಬ ಸಂದೇಶ ಸಾರುವ ಇವರ ಜನಪ್ರಿಯ ಕಲಾಕೃತಿ ತೆಂಗಿನ ಸಿಪ್ಪೆಯಲ್ಲಿ ಮೂಡಿಬಂದಿದೆ. ಅಡಿಕೆ ಸಿಪ್ಪೆಯೂ ಯಕ್ಷಗಾನದ ವಿದೂಷಕನಾದರೆ ತೆಂಗಿನ ಚಿಪ್ಪು ಪೆನ್ನು ಕ್ಯಾಂಡಲ್ ಸ್ಟ್ಯಾಂಡ್ ಆಗಿವೆ, ಇಲ್ಲವೇ ಹೂಕುಂಡ, ಕೀಚೈನ್ ಆಗಿ ಪರಿವರ್ತನೆಗೊಂಡಿವೆ. ಒಂದೇ ಎಲೆಯನ್ನು ಬಳಸಿ ಮಾಡುವ ಕಲಾಕೃತಿಗಳಲ್ಲದೆ ನೂರಾರು ಎಲೆಗಳನ್ನು ತೆಂಗಿನ ಗರಿಯ ಕಡ್ಡಿಗಳಿಂದ ಜೋಡಿಸಿ ತಯಾರಿಸಲಾದ ರಾಷ್ಟ್ರಪಕ್ಷಿ ನವಿಲು ಜೀವಂತಿಕೆಯನ್ನು ಹೊಂದಿದೆ. ಸುಮಾರು ಎಪ್ಪತ್ತು ಕಿಲೋ ಭಾರದ ಮರದ ಬೇರೊಂದು ಕಾಳಿಂಗ ಸರ್ಪದ ನೈಜತೆಯನ್ನು ಪಡೆದಿದೆ.

ಶಾಲೆಗಳಲ್ಲಿ ಇಂತಹ ಸಾವಿರಾರು ಕಲಾಕೃತಿಗಳನ್ನು ನಿರ್ಮಿಸುವ ಪ್ರಾತ್ಯಕ್ಷಿಕೆಯನ್ನು ನಂಬಿಯಾರ್ ಉತ್ಸಾಹದಿಂದ ನಡೆಸಿಕೊಡುತ್ತಾರೆ. 'ಈಗಾಗಲೇ ರಚಿಸಿರುವ ಕಲಾಕೃತಿಗಳು 2 ಲಾರಿಗಳಲ್ಲಿ ಹೇರಿಕೊಂಡು ಹೋಗಬಹುದಾದಷ್ಟು ಇರಬಹುದು. ಅವುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದೇ ದೊಡ್ಡ ತಲೆನೋವು. ಕಲಾಪ್ರದರ್ಶನಕ್ಕಾಗಿ ಇವುಗಳನ್ನು ಸಾಗಿಸುವುದು ಹಾಗೂ ಜೋಡಿಸುವುದು ಸವಾಲಿನ ಕೆಲಸ ಎನ್ನುತ್ತಾರೆ.

ಕಾಸರಗೋಡಿನ ಕೇಂದ್ರೀಯ ಪ್ಲಾಂಟೇಷನ್ ಬೆಳೆಗಳ ಸಂಶೋಧನಾ ಕೇಂದ್ರ (ಸಿ.ಪಿ.ಸಿ.ಆರ್.ಐ) ದಿಂದ 'ಅತ್ಯುತ್ತಮ ಕೃಷಿಕ' ಪ್ರಶಸ್ತಿಯನ್ನು ಪಡೆದಿರುವ ಇವರು ಎಲ್ಲೇ ಕರೆದರೂ ಉಚಿತ ತರಬೇತಿ ಕೊಡುವ ಹುಮ್ಮಸ್ಸು ಉಳ್ಳವರು. ಇಂಥ ಅಪರೂಪದ ಕಲೆಯನ್ನು ನಾವು, ನಮ್ಮ ಮಕ್ಕಳು ಕಲಿತು ಮನೆಯ ಅಂದವನ್ನು ಹೆಚ್ಚಿಸಬಹುದು. ಉಡುಗೊರೆಯಾಗಿಯೂ ನೀಡಬಹುದು. (ನಂಬಿಯಾರ್ ಅವರ ಮೊಬೈಲ್: 09544126150). ●





